**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಸಿ.ಸಿ. ನಂ:477/2018 ಪಿ.ಡಬ್ಲ್ಯೂ: 01**

ಸಾಕ್ಷಿಯನ್ನು ಇಂದು ದಿನಾಂಕ: **31.07.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟಿ ಸವಾಲು:** ಆರೋಪಿ ಪರ ಶ್ರೀ **ಪಿ.ಎಸ್** ವಕೀಲರಿಂದ:

ಈ ಪ್ರಕರಣವನ್ನು ದಾಖಲಿಸಲು ಮಾಹಿತಿಯನ್ನು ನಾನು ಹಾಗೂ ನನ್ನ ಗಂಡ ನೀಡಿರುತ್ತೇವೆ. ನನ್ನ ಗಂಡ ಹಾಗೂ ಆರೋಪಿಯ ನಡುವೆ ಯಾವುದೇ ವ್ಯವಹಾರದ ಸಂಬಂಧ ಇರುತ್ತದೆಯೇ ಎಂದರೆ ಸಾಕ್ಷಿಯು ನಾವು ಗಂಡ-ಹೆಂಡತಿ ಹಣ ಕೊಡುವುದು ಹಾಗೂ ವಾಪಸ ಪಡೆಯುವುದು ಮಾಡುತ್ತೇವೆ ಎಂದು ನುಡಿಯುತ್ತಾರೆ. ನನ್ನ ಗಂಡ ಹಾಗೂ ಆರೋಪಿಯ ನಡುವೆ ವ್ಯವಹಾರಿಕ ಸಂಬಂಧ ಇರುತ್ತದೆ. ನಾನು, ಆರೋಪಿ ಮತ್ತು ಅವರ ಗಂಡನ ಜೊತೆ ಮಾಡಿರುವ ಹಣಕಾಸಿನ ವ್ಯವಹಾರದ ಬಗ್ಗೆ ನನ್ನ ಗಂಡನಿಗೆ ತಿಳಿದಿರುತ್ತದೆ. ಆರೋಪಿಯು ಗಾರ್ಮೆಂಟ್ಸ್ ಕಾರ್ಖಾನೆ ಇಟ್ಟಿರುವ ಬಗ್ಗೆ ನಾನು ನನ್ನ ವಕೀಲರಿಗೆ ತಿಳಿಸಿರುತ್ತೇನೆ.

ಆರೋಪಿಯು ನನಗೆ ಚೆಕ್ಕನ್ನು ನೀಡಿದ ನಂತರ ನಾನು ಅದನ್ನು ಪರಿಶೀಲಿಸಿರುತ್ತೇನೆ. ಆರೋಪಿ ಮತ್ತು ಆಕೆಯ ಗಂಡ ಚಾಮನಹಳ್ಳಿ ಗ್ರಾಮದಲ್ಲಿ ಹುರಿ ಮಷಿನ್ ಇಟ್ಟುಕೊಂಡಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ನನಗೆ ನೀಡಿರುವ ನಿಪಿ-1 ಚೆಕ್ಕಿನಲ್ಲಿ ನಂದಿನಿ coir industries ಪರವಾಗಿ ಎಂದು ಇರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ.

ನನ್ನ ಗಂಡ 5 ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತಾರೆ. ನಿಪಿ-1 ಚೆಕ್ಕನ್ನು ಆಂಗ್ಲ ಭಾಷೆಯಲ್ಲಿ ಬರೆಯಲಾಗಿರುತ್ತದೆ ಎಂದರೆ ಸರಿ. ಸದರಿ ಬರವಣಿಗೆಯನ್ನು ಆರೋಪಿಯೇ ಬರೆದಿರುತ್ತಾರೆ. ನಾನು ನನ್ನ ವಕೀಲರನ್ನು ಭೇಟಿ ಮಾಡಲು ಹೋದ ಸಂದರ್ಭದಲ್ಲಿ ನಿಪಿ-1 ಚೆಕ್ ನಂದಿನಿ coir industries ಗೆ ಸೇರಿರುವ ವಿಚಾರ ನನಗೆ

ತಿಳಿದಿತ್ತು ಎಂದರೆ ಸರಿಯಲ್ಲ. ಸದರಿ ಕಾರ್ಖಾನೆಗೆ ಆರೋಪಿಯು ಒಬ್ಬರೇ ಮಾಲೀಕರಾಗಿರುವುದಿಲ್ಲ ಹಾಗೂ ಸದರಿ ಕಾರ್ಖಾನೆಗೆ ಬೇರೆ ನಿರ್ದೇಶಕರು ಸಹ ಇರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಂದಿನಿ coir industries ಸಂಸ್ಥೆಯನ್ನು ನಾನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಸಂಸ್ಥೆಯಿರುವ ವಿಚಾರ ನನಗೆ ಗೊತ್ತಿದ್ದರೂ ಸಹ ಗೊತ್ತಿರುವುದಿಲ್ಲ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಸಲ್ಲಿಸಿರುವ ಖಾಸಗಿ ದೂರು, ನೋಟಿಸ್ ಹಾಗೂ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಆರೋಪಿಗೆ ಯಾವ ದಿನಾಂಕದಂದು ಹಣವನ್ನು ನೀಡಿರುತ್ತೇನೆ ಎನ್ನುವ ಸಂಗತಿಯನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ಹಣವನ್ನು ದಿನಾಂಕ 20.09.2017 ರಲ್ಲಿ ಪಡೆದುಕೊಂಡಿರುತ್ತಾರೆ. ನಾನು ಹಾಗೂ ನನ್ನ ಗಂಡ ಒಟ್ಟಾಗಿ ಹಣದ ವ್ಯವಹಾರ ಮಾಡುತ್ತೇವೆ.

ಕುಟುಂಬ ನಿರ್ವಹಣೆಗಾಗಿ ನಾವು ರೇಷ್ಮೆ ಬೆಳೆಯುತ್ತೇವೆ, ಕೋಳಿ ಫಾರಂ ಹೊಂದಿರುತ್ತೇವೆ, ಅಡಿಕೆ, ಬಾಳೆ ಹಾಗೂ ತೆಂಗಿನ ತೋಟ, ಕುರಿಸಾಕಣಿಕೆ ಹೊಂದಿರುತ್ತೇವೆ. ನನಗೆ ಹಾಗೂ ನನ್ನ ಗಂಡನಿಗೆ ಸೇರಿದ ಒಟ್ಟು 5 ರಿಂದ 6 ಎಕರೆ ಜಮೀನು ಇರುತ್ತದೆ. ಸದರಿ ಜಮೀನುಗಳ ಪಹಣಿ ಪತ್ರಿಕೆ ನನ್ನ ಹಾಗೂ ನನ್ನ ಗಂಡನ ಹೆಸರಿನಲ್ಲಿ ಇರುತ್ತದೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನಾನು ಕೋಳಿ ಫಾರಂ ನಡೆಸಲು ಕೃಷಿ ಇಲಾಖೆಯಿಂದ ಪರವಾನಿಗೆಯನ್ನು ಪಡೆದಿರುವುದಿಲ್ಲ. 2017 ರಲ್ಲಿ ನಾನು ಕೋಳಿ ಫಾರಂ ನಡೆಸುತ್ತಿದ್ದೆನು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಬಾಳೆ ಹಣ್ಣುಗಳನ್ನು ಎ.ಪಿ.ಎಂ.ಸಿ ಗೆ ಮಾರಾಟ ಮಾಡಿರುವ ಬಾಬ್ತು ದಾಖಲೆಗಳು ಇರುತ್ತವೆ. ಅಡಿಕೆ ಹಾಗೂ ತೆಂಗು ಬೆಳೆಗಳಿಂದ ಆದಾಯ ಇರುವ ಬಾಬ್ತು ಯಾವುದೇ ದಾಖಲೆಗಳು ಇರುವುದಿಲ್ಲ.

ಅಡಿಕೆ ಬೆಳೆಯನ್ನು ನಮ್ಮ ಊರಿಗೆ ಬಂದು ಖರೀದಿ ಮಾಡುತ್ತಾರೆ.

ನಮ್ಮ ಕುಟುಂಬದ ವಾರ್ಷಿಕ ಆದಾಯ ರೂ.5 ಲಕ್ಷಕ್ಕಿಂತ ಕಡಿಮೆ ಇರುತ್ತದೆ. ನಮ್ಮ ಕುಟುಂಬದಲ್ಲಿ ಒಟ್ಟು 4 ಜನ ಸದಸ್ಯರು ಇರುತ್ತಾರೆ. ನಾವು ಪಡಿತರ ಚೀಟಿಯನ್ನು ಹೊಂದಿರುತ್ತೇವೆ. ನಾವು ಬಿಪಿಎಲ್ ಕಾರ್ಡನನ್ನು ಹೊಂದಿರುತ್ತೇವೆ. ಸದರಿ ದಾಖಲೆಯನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ನಾನು ಆರೋಪಿಯ ಗಂಡ ಶಿವಕುಮಾರವರಿಗೆ ರೂ.5 ಲಕ್ಷ ಹಣವನ್ನು ಏಪ್ರಿಲ್ 2017 ರಲ್ಲಿ ನೀಡಿದ್ದು, ನನಗೆ ದಿನಾಂಕ ನೆನಪಿರುವುದಿಲ್ಲ. ರೇಷ್ಮೆ ಬೆಳೆಗಾರರಿಗೆ ಪಾಸಪುಸ್ತಕ ವಿತರಿಸಲಾಗುತ್ತದೆ ಎಂದರೆ ಸರಿ. ರೇಷ್ಮೆ ಬೆಳೆಯನ್ನು 2 ಎಕರೆ ಜಮೀನಿನಲ್ಲಿ ಬೆಳೆಯುತ್ತೇವೆ. ವರ್ಷಕ್ಕೆ 6 ಬಾರಿ ರೇಷ್ಮೆ ಬೆಳೆಯನ್ನು ಮಾರಾಟ ಮಾಡುತ್ತೇವೆ. ರೇಷ್ಮೆ ಬೆಳೆ ಮಾರಾಟ ಮಾಡಿದ ಬಾಬ್ತು ಪಾಸಪುಸ್ತಕದಲ್ಲಿ ನಮೂದು ಮಾಡಲಾಗುತ್ತದೆ ಎಂದರೆ ಸರಿ. ಸದರಿ ರೇಷ್ಮೆ ಪಾಸಪುಸ್ತಕವನ್ನು ಹಾಜರುಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

ನಾನು ಹಾಗೂ ನನ್ನ ಗಂಡ ಆದಾಯ ತೆರಿಗೆ ಪಾವತಿದಾರರಾಗಿರುವುದಿಲ್ಲ. ಆರೋಪಿ ಮತ್ತು ಆಕೆಯ ಗಂಡನೊಂದಿಗೆ ಸುಮಾರು 8 ರಿಂದ 9 ವರ್ಷಗಳಿಂದ ಹಣದ ವ್ಯವಹಾರ ಮಾಡುತ್ತಿದ್ದೇವೆ. ನನ್ನ ಹಾಗೂ ಗಂಡನ ಹೆಸರಿನಲ್ಲಿ ಪ್ರತ್ಯೇಕವಾಗಿ ಖಾತೆ ಹಾಗೂ ಪಾಸಪುಸ್ತಕ ಇರುತ್ತದೆ ಎಂದರೆ ಸರಿ. ನಾನು ಆರೋಪಿ ಮತ್ತು ಆಕೆಯ ಗಂಡನೊಂದಿಗೆ ಸುಮಾರು 8 ರಿಂದ 9 ವರ್ಷಗಳಿಂದ ಹಣದ ವ್ಯವಹಾರ ಮಾಡುತ್ತಿರುವ ಕಾರಣ ನನಗೆ ಹಣದ ವ್ಯವಹಾರದ ಬಗ್ಗೆ ತಿಳುವಳಿಕೆ ಇರುತ್ತದೆ ಎಂದರೆ ಸರಿ. ಆರೋಪಿ ಹಾಗೂ ಆಕೆಯ ಗಂಡನೊಂದಿಗೆ ಮಾಡಿದ ಹಣದ ವ್ಯವಹಾರದ ಬಾಬ್ತು ಯಾವುದೇ ಚೆಕ್ ಮುಖಾಂತರ ಹಣವನ್ನು ನಾನು ಪಡೆದುಕೊಂಡಿರುವುದಿಲ್ಲ. ರೂ.20 ಸಾವಿರಕ್ಕಿಂತ ಹೆಚ್ಚಿನ ವ್ಯವಹಾರದ ಹಣವನ್ನು ಚೆಕ್ ಅಥವಾ ಬ್ಯಾಂಕ್ ಖಾತೆಯ ಮುಖಾಂತರ ಮಾಡಬೇಕು ಎನ್ನುವುದು

ನನಗೆ ಗೊತ್ತಿರುವುದಿಲ್ಲ. ರೂ.5 ಲಕ್ಷ ಹಣ ದೊಡ್ಡ ಮೊತ್ತದ ಹಣವಾಗಿರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ದೊಡ್ಡ ಮೊತ್ತದ ಹಣವನ್ನು ಸಾಲವಾಗಿ ನೀಡುವಾಗ ಚೆಕ್ಕಿನೊಂದಿಗೆ ವಚನ ಪತ್ರ ಹಾಗೂ ದಾಖಲೆಗಳನ್ನು ಬರೆಸಿಕೊಳ್ಳುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಾಲವಾಗಿ ನೀಡಿದ್ದ ಹಣಕ್ಕೆ ಬಡ್ಡಿ ಹಣವನ್ನು ಸೇರಿಸಿಕೊಡಲು ನಾನು ಹೇಳಿರುತ್ತೇನೆ.

ಆರೋಪಿಗೆ ಹಣವನ್ನು ಬಡ್ಡಿ ಹಣಕ್ಕೆ ಸಾಲವಾಗಿ ನೀಡಿರುವ ವಿಚಾರವನ್ನು ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ, ಖಾಸರಿ ದೂರು ಹಾಗೂ ನೋಟಿಸನಲ್ಲಿ ತಿಳಿಸಿರುತ್ತೀರಾ ಎಂದರೆ ಸಾಕ್ಷಿಯು ಹಣವನ್ನು ನಿಗಧಿತ ಅವಧಿಯೊಳಗೆ ನೀಡಿದ್ದರೇ ಬಡ್ಡಿಯ ಅವಶ್ಯಕತೆ ಇರುವುದಿಲ್ಲ, ಆದರೆ ನಿಗಧಿತ ಅವಧಿ ಮೀರಿದ್ದರೇ ಬಡ್ಡಿ ಹಣವನ್ನು ಸೇರಿಸಿ ಕೊಡಬೇಕೆಂದು ಮಾತುಕತೆ ಆಗಿರುತ್ತದೆ ಎಂದು ನುಡಿಯುತ್ತಾರೆ. ಆರೋಪಿಯು ಶೇಕಡಾ 2 ರಂತೆ ಮಾಸಿಕ ಬಡ್ಡಿಯನ್ನು ನೀಡುತ್ತೇವೆ ಎಂದು ಒಪ್ಪಿಕೊಂಡಿರುತ್ತಾರೆ. ನಾನು ಬಡ್ಡಿ ಹಣವನ್ನು ಸೇರಿಸಿ ಅಥವಾ ಬಿಟ್ಟು ಈ ಪ್ರಕರಣವನ್ನು ದಾಖಲಿಸಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ.

ಮುಂದುವರೆದ ಪಾಟೀ ಸವಾಲಿಗಾಗಿ ಆರೋಪಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**